CCE RF/PF/RR/PR/NSR/NSPR(A)/666/024

**A**

**ಮಾರ್ಚ್/ಏಪ್ರಿಲ್ 2024 ರ ಪರೀಕ್ಷೆ – 1**

**MARCH/APRIL 2024 EXAMINATION-1**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RF/PF/RR/PR/NSR/NSPR FULL SYLLABUS**

Question Paper Serial No.

**ಸಂಕೇತ ಸಂಖ್ಯೆ : 97-K**
**Code No. : 97-K**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Fresh / Private Fresh / Regular Repeater / Private Repeater / NSR / NSPR)**

ದಿನಾಂಕ : 30. 03. 2024 ] [ Date : 30. 03. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ***ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**30. 03. 2024**

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

POLITICAL SCIENCE

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ವಿಶ್ವದ ಅತ್ಯಂತ ದೊಡ್ಡ ರಾಷ್ಟ್ರೀಯ ಸಂವಿಧಾನ ಹೊಂದಿರುವ ರಾಷ್ಟ್ರ

   (A) ಬ್ರಿಟನ್

   (B) ಅಮೆರಿಕಾ

   (C) ಭಾರತ

   (D) ರಷ್ಯಾ

2. 'ಜಾತ್ಯಾತೀತ' ಎಂಬ ಪದವನ್ನು ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಲಾದ ತಿದ್ದುಪಡಿ

   (A) 51ನೇ ತಿದ್ದುಪಡಿ

   (B) 42ನೇ ತಿದ್ದುಪಡಿ

   (C) 32ನೇ ತಿದ್ದುಪಡಿ

   (D) 46ನೇ ತಿದ್ದುಪಡಿ

3. ಮೂಲಭೂತ ಹಕ್ಕುಗಳ ರಕ್ಷಕ

(A) ಸರ್ವೋಚ್ಚ ನ್ಯಾಯಾಲಯ

(B) ಉಚ್ಚ ನ್ಯಾಯಾಲಯ

(C) ಜಿಲ್ಲಾ ನ್ಯಾಯಾಲಯ

(D) ಲೋಕ ಅದಾಲತ್

4. ಭಾರತದಲ್ಲಿ ತುರ್ತು ಪರಿಸ್ಥಿತಿಗಳನ್ನು ಘೋಷಿಸುವವರು

(A) ರಾಜ್ಯಪಾಲರು

(B) ಮುಖ್ಯಮಂತ್ರಿಗಳು

(C) ಪ್ರಧಾನ ಮಂತ್ರಿಗಳು

(D) ರಾಷ್ಟ್ರಪತಿಗಳು

5. ಜಪಾನ್ ದೇಶದ ಸಂಸತ್ತು

(A) ಕಾಂಗ್ರೆಸ್

(B) ರಾಷ್ಟ್ರೀಯ ಪಂಚಾಯತ್

(C) ಪಾರ್ಲಿಮೆಂಟ್

(D) ಡಯಟ್

6. ಭಾರತದ ಸರ್ವೋಚ್ಚ ನ್ಯಾಯಾಲಯ ಸ್ಥಾಪನೆಯಾದದ್ದು

(A) ಆಗಸ್ಟ್ 15, 1947

(B) ಜನವರಿ 28, 1950

(C) ನವೆಂಬರ್ 26, 1949

(D) ಜನವರಿ 26, 1950

7. ರಾಜ್ಯದ ಸಮಸ್ತ ರಾಜಕೀಯ ಅಧಿಕಾರದ ನೇತಾರ / ನಾಯಕ

(A) ರಾಜ್ಯಪಾಲರು

(B) ಮುಖ್ಯಮಂತ್ರಿ

(C) ಉಪ ಮುಖ್ಯಮಂತ್ರಿ

(D) ಹಣಕಾಸು ಮಂತ್ರಿ

8. ಹಣಕಾಸಿನ ಮಸೂದೆಯನ್ನು ವಿಧಾನ ಪರಿಷತ್ತು ತಡೆಹಿಡಿಯಬಹುದಾದ ಅವಧಿ

(A) 15 ದಿನಗಳು

(B) 30 ದಿನಗಳು

(C) 10 ದಿನಗಳು

(D) 14 ದಿನಗಳು

9. ಪಂಚಾಯತ್‌ರಾಜ್ ವ್ಯವಸ್ಥೆಯ ಬೆನ್ನೆಲುಬು

(A) ಗ್ರಾಮ ಪಂಚಾಯಿತಿ

(B) ಜಿಲ್ಲಾ ಪಂಚಾಯಿತಿ

(C) ಗ್ರಾಮಸಭೆ

(D) ತಾಲ್ಲೂಕ್ ಪಂಚಾಯಿತಿ

10. ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಚೇರಿ ಇರುವ ಸ್ಥಳ

(A) ಬೆಂಗಳೂರು

(B) ಬೆಳಗಾವಿ

(C) ಮೈಸೂರು

(D) ಕಲಬುರ್ಗಿ

**II.** 11. ***A*-ಪಟ್ಟಿಯ ಅಂಶಗಳನ್ನು *B*-ಪಟ್ಟಿಯ ಅಂಶಗಳೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| *A*-ಪಟ್ಟಿ | *B*-ಪಟ್ಟಿ |
|---|---|
| (A) ಸಂವಿಧಾನದ 20ನೇ ವಿಧಿ | (i) ಗುಲಾಮಗಿರಿಯ ನಿಷೇಧ |
| (B) ಸಂವಿಧಾನದ 21ನೇ ವಿಧಿ | (ii) ಬಾಲಕಾರ್ಮಿಕರ ನಿಷೇಧ |
| (C) ಸಂವಿಧಾನದ 21(ಎ) ವಿಧಿ | (iii) ನಿರಂಕುಶ ಶಿಕ್ಷೆಯ ವಿರುದ್ಧ ರಕ್ಷಣೆ |
| (D) ಸಂವಿಧಾನದ 23ನೇ ವಿಧಿ | (iv) ಜೀವ ಸ್ವಾತಂತ್ರ್ಯದ ಹಕ್ಕು |
| (E) ಸಂವಿಧಾನದ 24ನೇ ವಿಧಿ | (v) ಉಚಿತ ಮತ್ತು ಕಡ್ಡಾಯ ಶಿಕ್ಷಣ |
| | (vi) ಆಸ್ತಿಯ ಹಕ್ಕು |
| | (vii) ಧಾರ್ಮಿಕ ಹಕ್ಕು |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಭಾರತದ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರು ಯಾರು ?

13. ರಾಜ್ಯದೊಳಗಿನ ಅತ್ಯುನ್ನತ ನ್ಯಾಯಾಲಯ ಯಾವುದು ?

14. ಮಹಾನಗರ ಪಾಲಿಕೆ ಸದಸ್ಯರನ್ನು ಏನೆಂದು ಕರೆಯುತ್ತಾರೆ ?

15. ಸಂವಿಧಾನ ಎಂದರೇನು ?

16. ಭ್ರಾತೃತ್ವವನ್ನು ವ್ಯಾಖ್ಯಾನಿಸಿ.

17. "ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಇರುವ ಸರ್ಕಾರವೇ ಪ್ರಜಾಪ್ರಭುತ್ವ" ಎಂದು ಹೇಳಿದವರು ಯಾರು ?

18. ಏಕ ಪೌರತ್ವ ಎಂದರೇನು ?

19. ಭಾರತದ ಸಂಸತ್ತಿನ ಕೆಳಮನೆ ಯಾವುದು ?

20. ಅವಿಶ್ವಾಸ ನಿರ್ಣಯ ಎಂದರೇನು ?

21. ರಾಜ್ಯ ಮಂತ್ರಿಮಂಡಲದ ಅಧ್ಯಕ್ಷತೆಯನ್ನು ಯಾರು ವಹಿಸುತ್ತಾರೆ ?

22. ರಾಜ್ಯ ಶಾಸಕಾಂಗದ ಶಾಶ್ವತ ಸದನ ಯಾವುದು ?

23. ಉದಾರವಾದಿ ತತ್ವಗಳನ್ನು ವ್ಯಾಖ್ಯಾನಿಸಿ.

24. ಭಾರತದ ರಾಷ್ಟ್ರಪತಿಗಳ ಅಧಿಕಾರಾವಧಿ ಎಷ್ಟು ವರ್ಷಗಳು ?

25. ನಮ್ಮ ಸಂವಿಧಾನದ 'ಮ್ಯಾಗ್ನಕಾರ್ಟ್' ಎಂದು ಯಾವುದನ್ನು ಕರೆಯಲಾಗಿದೆ ?

26. ವಿಧಾನಸಭೆಯನ್ನು ಜನತಾ ಸದನ ಎಂದು ಏಕೆ ಕರೆಯಲಾಗಿದೆ ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಗ್ರಾಹಕ ನ್ಯಾಯಾಲಯದಿಂದ ಆಗುವ ಉಪಯೋಗಗಳೇನು ?

28. ಭಾರತೀಯ ರಾಜಕೀಯ ಪದ್ಧತಿಯ ನಾಲ್ಕು ತಾತ್ವಿಕ ಸ್ಥಂಭಗಳಾವುವು ?

29. ಸಮಾನತೆಯ ಹಕ್ಕನ್ನು ವ್ಯಾಖ್ಯಾನಿಸಿ.

30. ಸಂಸದೀಯ ಮಾದರಿ ಸರ್ಕಾರ ಎಂದರೇನು ?

31. ರಾಜ್ಯನೀತಿ ನಿರ್ದೇಶಕ ತತ್ವದಲ್ಲಿರುವ ಯಾವುದಾದರೂ ಎರಡು ಉದಾರವಾದಿ ತತ್ವಗಳನ್ನು ಹೆಸರಿಸಿ.

32. ಗ್ರಾಮಸಭೆಯ ಮುಖ್ಯ ಕಾರ್ಯಗಳು ಯಾವುವು ?

33. ಲೋಕಸೇವಾ ಆಯೋಗದ ಮೂರು ವಿಧಗಳನ್ನು ಹೆಸರಿಸಿ.

34. ನಗರ ಸ್ಥಳೀಯ ಸಂಸ್ಥೆಗಳ ವಿಧಗಳು ಯಾವುವು ?

35. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿ ವಿಧಾನವನ್ನು ತಿಳಿಸಿ.

36. ಗ್ರಾಮೀಣ ಸ್ಥಳೀಯ ಸಂಸ್ಥೆಗಳನ್ನು ಹೆಸರಿಸಿ.

37. ತುರ್ತು ಪರಿಸ್ಥಿತಿಯ ವಿಧಗಳಾವುವು ?

38. ಭಾರತದ ರಾಷ್ಟ್ರಪತಿಯವರನ್ನು ಹೇಗೆ ಚುನಾಯಿಸಲಾಗುತ್ತದೆ ?

39. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಒಂದು ಉದಾಹರಣೆಯೊಂದಿಗೆ ವಿವರಿಸಿ.

40. ರಾಜ್ಯಪಾಲರಾಗಲು ಇರಬೇಕಾದ ಅರ್ಹತೆಗಳು ಯಾವುವು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ ರಾಜ್ಯ ಉಚ್ಚ ನ್ಯಾಯಾಲಯವು ಹೊರಡಿಸುವ ಆಜ್ಞೆಗಳು ಯಾವುವು ?

42. ಹಳ್ಳಿಗಳ ಅಭಿವೃದ್ಧಿಗಾಗಿ ಗ್ರಾಮಪಂಚಾಯಿತಿಗಳು ಕೈಗೊಳ್ಳುವ ಕಾರ್ಯಕ್ರಮಗಳು ಯಾವುವು ?

43. ಭಾರತದ ಸಂವಿಧಾನವು ನಮಗೆ ನೀಡಿರುವ ಮೂಲಭೂತ ಹಕ್ಕುಗಳು ಯಾವುವು ?

44. ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು ?

45. ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿರುವ ಗಾಂಧಿವಾದದ ಅಂಶಗಳನ್ನು ಪಟ್ಟಿ ಮಾಡಿ.

46. ಭಾರತದ ಸಂವಿಧಾನದ ಪ್ರಧಾನ ಲಕ್ಷಣಗಳನ್ನು ಪಟ್ಟಿ ಮಾಡಿ.

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **1 × 4 = 4**

47. ಭಾರತದ ಸಂವಿಧಾನದ ಪ್ರಸ್ತಾವನೆಯ ಮಹತ್ವವನ್ನು ವಿವರಿಸಿ.

DO NOT WRITE ANYTHING HERE